# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 124 |
| ಸದಸ್ಯರ ಹೆಸರು | ಶ್ರೀ ಎಸ್. ರವಿ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | 14-2-2024 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಭೂಮಾಪಕರ ಹುದ್ದೆಗಳು ಹಲವಾರು ವರ್ಷಗಳಿಂದ ಖಾಲಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಸದರಿ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ಬಾಕಿಯಿರುವ ಹದ್ದುಬಸ್ತು ಪ್ರಕರಣಗಳು, ಇ-ಸ್ವತ್ತು, ಕೋರ್ಟ್ ಡಿಕ್ರಿ ಪ್ರಕಣಗಳು, ಕೆರೆ ಮತ್ತು ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಭೂ ಮಂಜೂರಿ ಜಮೀನುಗಳ ದುರಸ್ತಿಗಳು ಇತ್ಯರ್ಥಗೊಳ್ಳಲು ವರ್ಷಗಳಿಗೂ ಅಧಿಕ ಸಮಯ ತೆಗೆದುಕೊಳ್ಳುತ್ತಿರುವುದರಿಂದ ರೈತರಿಗೆ ಹೆಚ್ಚಿನ ತೊಂದರೆಯಾಗುತ್ತಿರುವುದು ನಿಜವೇ; | • ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದಿನಾಂಕ:1-4-2023 ರಿಂದ 31-01-2024 ರವರೆಗೆ ಹದ್ದುಬಸ್ತು, ಇಸ್ವತ್ತು, ಕೋರ್ಟ್ ಡಿಕ್ರಿ (ಪೋಡಿ) ಪ್ರಕರಣಗಳು ಸ್ವೀಕೃತಗೊಂಡ ಹಾಗೂ ಹಿಂದಿನ ಬಾಕಿ ಒಳಗೊಂಡಂತೆ 27676 ಪ್ರಕರಣಗಳ ಪೈಕಿ 21303 ಪ್ರಕರಣಗಳು ವಿಲೇವಾರಿಯಾಗಿ 6371 ಪ್ರಕರಣಗಳು ಬಾಕಿಯಿರುತ್ತವೆ. ಬಾಕಿಯಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಹದ್ದುಬಸ್ತು, ಇ-ಸ್ವತ್ತು ಪ್ರಕರಣಗಳನ್ನು ಸರ್ಕಾರಿ ಭೂಮಾಪಕರೊಂದಿಗೆ ಪರವಾನಗಿ ಭೂಮಾಪಕರುಗಳಿಗೂ ಸಹ ವಿತರಿಸಲಾಗುತ್ತಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಸ್ತುತ ಅರ್ಜಿ ಸ್ವೀಕೃತವಾದ ದಿನಾಂಕದಿಂದ ತಕರಾರು /ತಿದ್ದುಪಡಿ ಇಲ್ಲದಿದ್ದಲ್ಲಿ ಸರಾಸರಿ 2 ತಿಂಗಳೊಳಗಾಗಿ ವಿಲೇವಾರಿ ಮಾಡಿ, ಕೋರ್ಟ್ ಡಿಕ್ರಿ ಪ್ರಕರಣಗಳನ್ನು ಸರ್ಕಾರಿ ಭೂಮಾಪಕರಿಗೆ ಆದ್ಯತೆಯ ಮೇರೆಗೆ ವಿಲೇವಾರಿ ಮಾಡಲಾಗುತ್ತಿದೆ.<br><br>• ರಾಮನಗರ ಜಿಲ್ಲೆಯಲ್ಲಿ ದಿನಾಂಕ 1-4-2023 ರಿಂದ 31-01-2024 ರವರೆಗೆ ಹದ್ದುಬಸ್ತು, ಇಸ್ವತ್ತು, ಕೋರ್ಟ್ ಡಿಕ್ರಿ (ಪೋಡಿ) ಪ್ರಕರಣಗಳು ಸ್ವೀಕೃತಗೊಂಡ ಹಾಗೂ ಹಿಂದಿನ ಬಾಕಿ ಒಳಗೊಂಡಂತೆ 35680 ಪ್ರಕರಣಗಳ ಪೈಕಿ 24468 ಪ್ರಕರಣಗಳು ವಿಲೇವಾರಿಯಾಗಿ 11212 ಪ್ರಕರಣಗಳು ಬಾಕಿಯಿರುತ್ತವೆ. ಬಾಕಿಯಿರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಹದ್ದುಬಸ್ತು, ಇಸ್ವತ್ತು ಪ್ರಕರಣಗಳನ್ನು ಸರ್ಕಾರಿ ಭೂಮಾಪಕರೊಂದಿಗೆ ಪರವಾನಗಿ ಭೂಮಾಪಕರುಗಳಿಗೂ ಸಹ ವಿತರಿಸಲಾಗುತ್ತಿದೆ. ರಾಮನಗರ ಜಿಲ್ಲೆಯಲ್ಲಿ ಪ್ರಸ್ತುತ ಅರ್ಜಿ ಸ್ವೀಕೃತವಾದ ದಿನಾಂಕದಿಂದ ಯಾವುದೇ ತಕರಾರು/ತಿದ್ದುಪಡಿ |

| | | |
|---|---|---|
| | | ಇಲ್ಲದಿದ್ದಲ್ಲಿ ಸರಾಸರಿ 2 ತಿಂಗಳೊಳಗಾಗಿ ವಿಲೆವಾರಿ ಮಾಡಿ ಕೋರ್ಟ್ ಡಿಕ್ರಿ ಪ್ರಕರಣಗಳನ್ನು ಸರ್ಕಾರಿ ಭೂಮಾಪಕರಿಗೆ ಆದ್ಯತೆಯ ಮೇರೆಗೆ ವಿಲೆವಾರಿ ಮಾಡಲಾಗುತ್ತಿದೆ.<br>• ಭೂದಾಖಲೆಗಳ ಉಪ ನಿರ್ದೇಶಕರು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದು ಕೆರೆ ಒತ್ತುವರಿ ಮತ್ತು ಸರ್ಕಾರಿ ಜಮೀನುಗಳ ಒತ್ತುವರಿ ಕೆಲಸಗಳನ್ನು ತಾಲ್ಲೂಕು ಭೂಮಾಪಕರ ಮೂಲಕ ನಿರ್ವಹಿಸಲಾಗುತ್ತಿದೆ. ಸದರಿ ಭೂಮಾಪಕರು ತಹಸೀಲ್ದಾರ್ ರವರ ನೇತೃತ್ವದಲ್ಲಿ ಒತ್ತುವರಿಯನ್ನು ಗುರ್ತಿಸುವ ಹಾಗೂ ತೆರವುಗೊಳಿಸುವ ಕೆಲಸ ನಿರ್ವಹಿಸುತ್ತಿರುತ್ತಾರೆ. |
| ಇ) | ಹಾಗಿದ್ದಲ್ಲಿ, ಹಲವಾರು ವರ್ಷಗಳಿಂದ ಖಾಲಿಯಿರುವ ಭೂಮಾಪಕರ ಹುದ್ದೆಗಳನ್ನು ಯಾವ ಕಾಲಮಿತಿಯಲ್ಲಿ ಭರ್ತಿ ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಭೂಮಾಪನ ಇಲಾಖೆಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆಗಳಲ್ಲಿ 264 ಉಳಿಕೆ ಮೂಲ ವೃಂದದ ಮತ್ತು 100 ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದದ ಒಟ್ಟು 364 ಭೂಮಾಪಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ, ಅಂಗವಿಕಲರ ಮೀಸಲಾತಿಯ ವರ್ಗೀಕರಣವನ್ನು ಅಳವಡಿಸಿಕೊಂಡು ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆಯ್ಕೆ ಪಟ್ಟಿ ಸ್ವೀಕೃತವಾದ ನಂತರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು.<br>ಮುಂದುವರಿದು, 2023 ನೇ ಸಾಲಿನಲ್ಲಿ 2000 ಪರವಾನಗಿ ಭೂಮಾಪಕರುಗಳ ಆಯ್ಕೆಗೆ ಅಧಿಸೂಚನೆ ಹೊರಡಿಸಲಾಗಿದ್ದು, ಪ್ರಸ್ತುತ 1405 ಅಭ್ಯರ್ಥಿಗಳಿಗೆ ಪರವಾನಗಿ ಭೂಮಾಪಕರುಗಳ ವೃತ್ತಿ ಬುನಾದಿ ತರಬೇತಿ ನೀಡಲಾಗಿದೆ. ಈ ಪೈಕಿ ಉತ್ತೀರ್ಣರಾದ 991 ಅಭ್ಯರ್ಥಿಗಳಿಗೆ ದಿನಾಂಕ:6-2-2024 ಮತ್ತು 7-2-2024 ರಂದು ಕೌನ್ಸಲಿಂಗ್ ನಡೆಸಿ ತಾಲ್ಲೂಕುವಾರು 991 ಪರವಾನಗಿ ಭೂಮಾಪಕರಿಗೆ ಸ್ಥಳ ನಿಯೋಜಿಸಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಕಂಇ 21 ಎಸ್‌ಎಸ್‌ಸಿ 2024**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು